ಈ) ಅಸ್ಥಿಚಿಕಿತ್ಸಾ ವಿಭಾಗಕ್ಕೆ ಒದಗಿಸಿದ ಎಕ್ಸರೇ ಯಂತ್ರಗಳೆಷ್ಟು, ಅವು ಪ್ರಯೋಜನ ಪಡೆಯಂಪ ಸ್ಥಿತಿಯಲ್ಲಿವೆಯೇ ?

ಉ) ಎಕ್ಸರೇ ಕೋಣೆಯು ಮೇಲ್ಛಾವಣಿಯು ಸೋರುತ್ತಿರುವುದು ನಿಜವೇ ?

ಊ) ಕ್ಯಾನ್ಸರ್ ವಾರ್ಡ್ ಎಕ್ಸರೇ ಕೋಣೆಯ ಮೇಲಿರುವುದು ನಿಜವೇ ?

ಋ) ಕ್ಯಾನ್ಸರ್ ವಾರ್ಡ್ ಎಕ್ಸರೇ ಕೋಣೆಯ ಮೇಲೆ ಇದ್ದು ಕ್ಯಾನ್ಸರ್ ವಾರ್ಡಿನ ಶೌಚಾಲಯದ ನೀರು ಎಕ್ಸರೇ ವಾರ್ಡಿನ ಮೇಲೆ ಸೋರುತ್ತಿರುವುದು ನಿಜವೇ ?

ಋೂ) ಈ ಸೋರಿಕೆಯನ್ನು ನಿಲ್ಲಿಸಲು ಕೈಗೊಂಡ ಕ್ರಮವೇನು, ಮತ್ತು ಯಾವಾಗ ಈ ಸೋರಿಕೆಯನ್ನು ನಿಲ್ಲಿಸಲಾಗುವುದು ?

ಶ್ರೀ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ೮೦೦ ಎಂಎ ಎಕ್ಸರೇ ಯಂತ್ರ–ಒಂದು

೫೦೦ ಎಂಎ ಎಕ್ಸರೇ ಯಂತ್ರಗಳು–ಮೂರು

೫೦ ಎಂಎ ಪೋರ್ಟಬಲ್–ಎರಡು

ಆ) ಏಳು ಎಕ್ಸರೇ ಯಂತ್ರಗಳನ್ನು ಸ್ಥಾಪಿಸಿದ್ದು, ಅವುಗಳಲ್ಲಿ ೩ ಯಂತ್ರಗಳು ಪ್ರಯೋಜನ ಪಡೆಯುವ ಸ್ಥಿತಿಯಲ್ಲಿವೆ:

ಇ) ನಾಲ್ಕು ಎಕ್ಸರೇ ಯಂತ್ರಗಳು ಈ ಕೆಳಗಿನ ದಿನಾಂಕದಿಂದ ಹಾಳಾಗಿವೆ.

ಎ) ದಿನಾಂಕ ೫–೪–೧೯೮೯ ರಿಂದ ೫೦೦ ಎಂಎ

ಬಿ) ದಿನಾಂಕ ೯–೧೨–೧೯೮೭ ರಿಂದ ೫೦೦ ಎಂಎ

ಸಿ) ದಿನಾಂಕ ೨೫–೧೧–೧೯೮೫ ರಿಂದ ೧೦೦೦ ಎಂಎ

ಡಿ) ೧೯೯೦ ಏಪ್ರಿಲ್ ನಿಂದ ೩೦೦ ಎಂಎ ಯುನಿಟ್ ವಿಥ್ ಟಿವಿ (ರಿಪೇರಿ ಮಾಡಬಹುದು)

ಈ) ಒಂದು ೫೦ ಎಂಎ ಎಕ್ಸರೇ ಯಂತ್ರವನ್ನು ಅಸ್ಥಿಚಿಕಿತ್ಸಾ ವಿಭಾಗಕ್ಕೆ ನೀಡಿದ್ದು, ಅವು ಕಳೆದ ಮೂರೂ ವರ್ಷಕ್ಕೂ ಮುಂಚೆಯಿಂದ ಹಾಳಾಗಿದೆ. ಅದನ್ನು ನಿಷ್ಪ್ರಯೋಜಕವೆಂದು ಪರಿಗಣಿಸಬೇಕಾಗಿದೆ

ಉ) ಹೌದು–ಆಗಾಗ ಸೋರುತ್ತಿದೆ.

ಊ) ಹೌದು

ಋ) ಹೌದು–ಆಗಾಗ ಸೋರುತ್ತಿದೆ.

ಋೂ) ಸೋರುತ್ತಿರುವ ಭಾವಣಿಯನ್ನು ಹೆಲವು ಬಾರಿ ದುರಸ್ತಿಗೊಳಿಸಲಾಗಿದೆ. ಆದರೂ ಸಹ ಈ ಸೋರಿಕೆಯು ಪೂರ್ಣಿಯಾಗಿ ನಿಂತಿಲ್ಲ. ಈ ಕಟ್ಟಡವು ಹಳೆಯದಾಗಿದ್ದು ಲೋಕೋಪಯೋಗಿ ಇಲಾಖೆಯವರು ಆಗಾಗ ದುರಸ್ತಿ ಮಾಡುತ್ತಿದ್ದಾರೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ರಾಜ್ಯದಲ್ಲಿರುವ ಹಸಿರು ಕಾರ್ಡುಗಳ ಬಗ್ಗೆ ಹಾಗೂ ಕೆಂಪು ಕಾರ್ಡುಗಳ ಬಗ್ಗೆ

೨೪೦. ಶ್ರೀ ಪಿ. ಜಿ. ಆರ್. ಸಿಂಧ್ಯಾ (ಕನಕಪುರ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿರುವ ಒಟ್ಟು ಹಸಿರು ಹಾಗೂ ಕೆಂಪು ಕಾರ್ಡುಗಳ ಸಂಖ್ಯೆ ಎಷ್ಟು ?

ಆ) ಈ ಕಾರ್ಡುಗಳ ಬಣ್ಣವನ್ನು ಯಾವಾಗ ಬದಲಾವಣೆ ಮಾಡಲಾಗುವುದು ?

ಇ) ಈ ಕಾರ್ಡುಗಳನ್ನು ಹೆಚ್ಚಿಸುವ ಕಾರ್ಯಕ್ರಮ ಸರ್ಕಾರದ ಮುಂದಿದೆಯೆ ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಅ) ೧) ಹೊಸರು ಕಾರ್ಡುಗಳು–೩೧,೧೧,೩೯೫

೨) ಕೆಂಪು ಕಾರ್ಡುಗಳು–೨೬,೯೯,೭೭೫

ಆ) ಈ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸುತ್ತಿದೆ.

ಇ) ಹೌದು

ರಾಜ್ಯದ ಬತ್ತದ ಲೆವಿ ನೀತಿಯ ಬಗ್ಗೆ

೨೩೯. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ),—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಬತ್ತದ ಲೆವಿ ನೀತಿಯಲ್ಲಿ ಬದಲಾವಣೆ ಇದೆಯೆ,

ಆ) ಬದಲಾವಣೆ ಇದ್ದರೆ, ಎಂದಿನಿಂದ ಬದಲಾವಣೆ ಮಾಡಲಾಗುವುದು.

ಶ್ರೀ ಟಿ. ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಪ್ರಕೃತಿ–ಚಿಕಿತ್ಸಾಲಯಂಗಳ ಬಗ್ಗೆ

೨೪೧. ಶ್ರೀ ಪಿ.ಜಿ ಆರ್. ಸಿಂಧ್ಯ (ಕನಕಪುರ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸರ್ಕಾರಿ ವಲಯದಲ್ಲಿ ಎಷ್ಟು ಪ್ರಕೃತಿ ಚಿಕಿತ್ಸಾಲಯದ ಆಸ್ಪತ್ರೆಗಳಿವೆ ? (ಜಿಲ್ಲಾವಾರು ವಿವರಗಳನ್ನು ನೀಡುವುದು)

ಆ) ಇವುಗಳನ್ನು ಹೆಚ್ಚು ಮಾಡಲು ಸರ್ಕಾರದ ಮುಂದೆ ಏನಾದರೂ ಕಾರ್ಯಕ್ರಮಗಳಿವೆಯೇ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯರು).—

ಅ) ರಾಜ್ಯದಲ್ಲಿ ಆರು ಹಾಸಿಗೆಗಳುಳ್ಳ ಒಂದು ಪ್ರಕೃತಿ ಚಿಕಿತ್ಸಾ ಆಸ್ಪತ್ರೆ ಮೈಸೂರಿನಲ್ಲಿದೆ. ಮತ್ತು ಐದು ಪ್ರಕೃತಿ ಚಿಕಿತ್ಸಾಲಯಂಗಳು ಈ ಕೆಳಕಂಡ ಸ್ಥಳಗಳಲ್ಲಿವೆ.

೧. ಸಿದ್ಧರಬೆಟ್ಟ, ತುಮಕೂರು ಜಿಲ್ಲೆ.

೨. ಪೋಚಿಹಳ್ಳಿ, ಚಿಕ್ಕಮಗಳೂರು ಜಿಲ್ಲೆ.

೩. ಸಂಪಗಾಂ, ಬೆಳಗಾಂ ಜಿಲ್ಲೆ.

೪. ಬೆಂಗೇರಿ, ಧಾರವಾಡ ಜಿಲ್ಲೆ.

೫. ದಾವಣಗೆರೆ, ಚಿತ್ರದುರ್ಗ ಜಿಲ್ಲೆ.

ಆ) ಏನೆಯ ಯೋಜನೆಯಲ್ಲಿ ರಾಜ್ಯವಲಯ ಹಾಗೂ ಜಿಲ್ಲಾ ವಲಯಗಳಲ್ಲಿಯ ಆಯವ್ಯಯದ ಲಭ್ಯತೆಯನ್ನು ನೋಡಿಕೊಂಡು, ಪ್ರಕೃತಿ ಚಿಕಿತ್ಸಾಲಯಗಳ ಸಂಖ್ಯೆಯನ್ನು ಹೆಚ್ಚಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ರೇಷನ್ ಕಾರ್ಡುಗಳನ್ನು ಹೆಚ್ಚಿಸಿರುವ ಬಗ್ಗೆ

೨೫೮ ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೯೯–೯೦ ಮತ್ತು ೧೯೯೦–೯೧ನೇ ಸಾಲಿನಲ್ಲಿ ಪಟ್ಟಣ ಪ್ರದೇಶದಲ್ಲಿ ಪಡಿತರ ಕಾರ್ಡುಗಳನ್ನು ಹೆಚ್ಚು ಮಾಡಲಾಗಿದೆಯೆ,